ಆರ್ ಬಿ ಐ / 2005 –06 / 317
ಡಿ ಎನ್ ಬಿ ಎಸ್ .ಪಿಡಿ. ಸಿಸಿ .ಸಂಖ್ಯೆ. 64 / 03.10.042 /2005–06

ಮಾರ್ಚ್ 7,2006

ಗೆ,
ಎಲ್ಲ ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು
ವಿವಿಧ ಬಗೆಯ ಬ್ಯಾಂಕಿಂಗೇತರ ಕಂಪನಿಗಳು
ಮತ್ತು ಉಳಿದ ಬ್ಯಾಂಕಿಂಗೇತರ ಕಂಪನಿಗಳು
ಮಾನ್ಯರೆ,

**ನಿಮ್ಮ ಗ್ರಾಹಕನ ಬಗ್ಗೆ ತಿಳಿಯಿರಿ ಮಾರ್ಗಸೂಚಿಗಳು – ಅಕ್ರಮ ಹಣ ಸಕ್ರಮೀಕರಣ ನಿರೋಧ ಮಾನಕಗಳು**

1. ಮೇಲ್ಕಂಡ ವಿಷಯದ ಬಗ್ಗೆ ದಿನಾಂಕ ಫೆಬ್ರವರಿ 21 , 2005 ರಂದು ಹೊರಡಿಸಲಾಗಿರುವ ನಮ್ಮ ಸುತ್ತೋಲೆ ಡಿಎನ್‌ಬಿಎಸ್.(ಪಿಡಿ). ಸಿಸಿ. 48/ 10.42/ 2004–05ನ್ನು ದಯವಿಟ್ಟು ನೋಡಿ. ಮೇಲಿನ ಸುತ್ತೋಲೆಯನ್ವಯ ಖಾತೆಯನ್ನು ತೆರೆಯುವಾಗ ಅನುಸರಿಸಬೇಕಾದ ಗ್ರಾಹಕ ಅಂಗೀಕಾರ ನೀತಿ ಮತ್ತು ಗ್ರಾಹಕನನ್ನು ಗುರುತಿಸುವ ಕಾರ್ಯ ವಿಧಾನವನ್ನು ರೂಪಿಸುವಂತೆ ಬ್ಯಾಂಕಿಂಗ್ ವ್ಯವಹಾರಗಳು ಮತ್ತು ಅಭಿವೃದ್ಧಿ (ಡಿಬಿಒಡಿ) ಇಲಾಖೆ ಬ್ಯಾಂಕುಗಳಿಗೆ ನೀಡಿರುವ ಸೂಚನೆಗಳ ರೀತಿಯಲ್ಲಿಯೇ ಎನ್‌ಬಿಎಫ್‌ಸಿಗಳಿಗೆ ತಿಳಿಸಲಾಗಿತ್ತು. ಗ್ರಾಹಕರನ್ನು ಕಡಿಮೆ, ಮಧ್ಯಮ ಮತ್ತು ಹೆಚ್ಚು ಅಪಾಯದಲ್ಲಿರುವವರು ಎಂದು ಗ್ರಹಿಸಿ, ಅಪಾಯಕ್ಕೆ ಅನುಸಾರವಾಗಿ ವರ್ಗೀಕರಿಸುವಂತೆಯೂ ಎನ್‌ಬಿಎಫ್‌ಸಿಗಳಿಗೆ ತಿಳಿಸಲಾಗಿತ್ತು. 'ನಿಮ್ಮ ಗ್ರಾಹಕನ ಬಗ್ಗೆ ತಿಳಿಯಿರಿ' ಕುರಿತ ಮಾರ್ಗಸೂಚಿಗಳು ಕೂಡ ಸುತ್ತೋಲೆಯ ಅನುಬಂಧ – ಖಖ ರಲ್ಲಿ ಪಟ್ಟಿ ಮಾಡಿರುವ ದಾಖಲೆಗಳ ಮೂಲಕ ಗ್ರಾಹಕನ ಗುರುತನ್ನು ಮತ್ತು ವಿಳಾಸವನ್ನು ಪರಿಶೀಲಿಸುವಂತೆ ಎನ್‌ಬಿಎಫ್‌ಸಿಗಳನ್ನು ಅಗತ್ಯಪಡಿಸುತ್ತವೆ. ಸದರಿ ಸುತ್ತೋಲೆಯನ್ನು ದಿನಾಂಕ ಫೆಬ್ರವರಿ 21, 2005 ರ ನಮ್ಮ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ.

2. ಮೇಲೆ ತಿಳಿಸಿದ ಸುತ್ತೋಲೆಯಲ್ಲಿ ಗುರುತು ಮತ್ತು ವಿಳಾಸದ ರುಜುವಾತಿನ ದಾಖಲೆಗಳ ಅಗತ್ಯತೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ್ದರೂ ಕೂಡ, ಕೆಲವರು ವಿಶೇಷವಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲಿ ಇರುವಂಥ ಕಡಿಮೆ ಆದಾಯ ಗುಂಪಿಗೆ ಸೇರಿದ ಜನ ತಮ್ಮ ಗುರುತು ಮತ್ತು ವಿಳಾಸದ ಬಗ್ಗೆ ಎನ್‌ಬಿಎಫ್‌ಸಿಗೆ ಮನವರಿಕೆಯಾಗುವಂಥ ದಸ್ತಾವೇಜುಗಳನ್ನು ಹಾಜರುಪಡಿಸುವ ಸ್ಥಿತಿಯಲ್ಲಿಲ್ಲದಿರುವ ಸನ್ನಿವೇಶಗಳಿರಬಹುದು . ಆದ್ದರಿಂದ ಅವರ ಎಲ್ಲ ಖಾತೆಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಐವತ್ತು ಸಾವಿರ ರೂಪಾಯಿಗಳಿಗೆ (ರೂ 50,000 /–) ಮೀರದಷ್ಟು ಶಿಲ್ಕನ್ನು ಖಾತೆಗಳಲ್ಲಿ ಉಳಿಸಿಕೊಂಡು ಬರಲು ಉದ್ದೇಶಿಸಿರುವ ಹಾಗೂ ಎಲ್ಲ ಖಾತೆಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಒಟ್ಟು ಸಾಲ ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ( ರೂ 1,00,000) ಮೀರುವುದಿಲ್ಲವೆಂದು ನಿರೀಕ್ಷಿಸಲಾಗಿರುವ ವ್ಯಕ್ತಿಗಳಿಗೆ ಎನ್‌ಬಿಎಫ್‌ಸಿಗಳು ಖಾತೆಗಳನ್ನು ತೆರೆಯುವುದಕ್ಕೆ ಸಂಬಂಧಿಸಿದ ಕೆವೈಸಿ (ನಿಮ್ಮ ಗ್ರಾಹಕನನ್ನು ತಿಳಿಯಿರಿ) ಕಾರ್ಯವಿಧಾನವನ್ನು ಮತ್ತಷ್ಟು ಸರಳೀಕರಿಸಲು ನಿರ್ಧರಿಸಲಾಗಿದೆ.

3. ಅದರಂತೆ ಖಾತೆಯನ್ನು ತೆರೆಯಲು ಬಯಸುವ ಒಬ್ಬ ವ್ಯಕ್ತಿಯು ದಿನಾಂಕ ಫೆಬ್ರವರಿ 21, 2005 ರ ನಮ್ಮ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಡಿಬಿಒಡಿ ಸುತ್ತೋಲೆಯ ಅನುಬಂಧ **ಖಖ** ರಲ್ಲಿ ತಿಳಿಸಿರುವ ದಾಖಲೆಗಳನ್ನು ಹಾಜರುಪಡಿಸಲು ಅಸಮರ್ಥನಾದ ಪಕ್ಷದಲ್ಲಿ ಎನ್‌ಬಿಎಫ್‌ಸಿಗಳು ಮೇಲಿನ ಪ್ಯಾರಾ 2 ರಲ್ಲಿ ವಿವರಿಸಿರುವಂತೆ, ಈ ಮುಂದಿನದಕ್ಕೆ ಒಳಪಟ್ಟು, ಖಾತೆಗಳನ್ನು ತೆರೆಯಬಹುದು.

(ಎ)ಪೂರ್ಣ ಕೆವೈಸಿ ಕಾರ್ಯವಿಧಾನಕ್ಕೆ ಒಳಪಟ್ಟಿರುವ ಬೇರೊಬ್ಬ ಖಾತೆದಾರನು ಪರಿಚಯ ಮಾಡಿಕೊಡಬೇಕು ಎನ್‌ಬಿಎಫ್‌ಸಿಯಲ್ಲಿರುವ ಪರಿಚಯಿಸುವವನ ಖಾತೆಯು ಆರು ತಿಂಗಳಷ್ಟು ಹಳೆಯದಾಗಿರಬೇಕು ಮತ್ತು ತೃಪ್ತಿಕರವಾದ ವ್ಯವಹಾರವನ್ನು ತೋರಿಸಬೇಕು. ಖಾತೆ ತೆರೆಯಲು ಉದ್ದೇಶಿಸುವ ಗ್ರಾಹಕನ ಭಾವಚಿತ್ರ ಮತ್ತು ಆತನ ವಿಳಾಸ ಇವುಗಳನ್ನು ಆತನನ್ನು ಪರಿಚಯಿಸುವವನು ಪ್ರಮಾಣೀಕರಿಸಬೇಕಾಗುತ್ತದೆ.

ಅಥವಾ

(ಬಿ)ಎನ್‌ಬಿಎಫ್‌ಸಿಗೆ ಮನವರಿಕೆಯಾಗುವಂತಹ ಗ್ರಾಹಕನ ಗುರುತು ಮತ್ತು ವಿಳಾಸಕ್ಕೆ ಸಂಬಂಧಿಸಿದ ಯಾವುದೇ ಇತರ ಸಾಕ್ಷ್ಯ

4. ಮೇಲೆ ವಿವರಿಸಿದಂತೆ ಖಾತೆಯನ್ನು ತೆರೆಯುವಾಗ, ಯಾವುದೇ ಒಂದು ಸಮಯದಲ್ಲಿ ಬ್ಯಾಂಕಿನಲ್ಲಿರುವ ಆತನ / ಆಕೆಯ ಎಲ್ಲ ಖಾತೆಗಳಲ್ಲಿನ ಶಿಲ್ಕು (ಒಟ್ಟಿಗೆ ತೆಗೆದುಕೊಂಡಾಗ) ಐವತ್ತು ಸಾವಿರ ರೂಪಾಯಿಗಳನ್ನು ( 50,000/– ರೂ )ಮೀರಿದರೆ ಅಥವ ಖಾತೆಯಲ್ಲಿನ ಒಟ್ಟು ಸಾಲವು ಒಂದು ಲಕ್ಷ ರೂಪಾಯಿಗಳನ್ನು ( 1,00,000 /– ರೂ) ಮೀರಿದರೆ ಕೆವೈಸಿ ಕಾರ್ಯವಿಧಾನವನ್ನು ಪೂರ್ಣಗೊಳಿಸುವವರೆಗೆ ಮುಂದಿನ ಯಾವುದೇ ವ್ಯವಹಾರಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂಬ ವಿಷಯವನ್ನು ಗ್ರಾಹಕನಿಗೆ ಮನವರಿಕೆ ಮಾಡಿಕೊಡಬೇಕು. ಗ್ರಾಹಕನಿಗೆ ಅನಾನುಕೂಲವಾಗದಂತೆ ಮಾಡುವ ಸಲುವಾಗಿ ಶಿಲ್ಕು ನಲವತ್ತು ಸಾವಿರ ರೂಪಾಯಿಗಳನ್ನು ( 40,000 /– ರೂ ) ತಲುಪಿದಾಗ ಅಥವಾ ಒಂದು ವರ್ಷದಲ್ಲಿ ಒಟ್ಟು ಸಾಲ ಎಂಬತ್ತು ಸಾವಿರ ರೂಪಾಯಿಗಳನ್ನು ( 80,000 /– ರೂ) ತಲುಪಿದಾಗ ಕೆವೈಸಿ ದೃಷ್ಟಿಯಿ0ದ ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ, ತಪ್ಪಿದಲ್ಲಿ ಎಲ್ಲ ಖಾತೆಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಒಟ್ಟು ಶಿಲ್ಕು ಐವತ್ತು ಸಾವಿರ ರೂಪಾಯಿಗಳನ್ನು (50,000/– ರೂ) ತಲುಪಿದಾಗ ಅಥವಾ ಖಾತೆಗಳಲ್ಲಿನ ಒಟ್ಟು ಸಾಲ ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ( 1,00,000/– ರೂ) ತಲುಪಿದಾಗ ಖಾತೆಯಲ್ಲಿನ ವ್ಯವಹಾರಗಳನ್ನು ನಿಲ್ಲಿಸುವುದಾಗಿ ಎನ್‌ಬಿಎಫ್‌ಸಿ ಗ್ರಾಹಕನಿಗೆ ಅಧಿಸೂಚಿಸತಕ್ಕದ್ದು.

5. ಈ ಸಂಬಂಧದಲ್ಲಿ ತಕ್ಷಣ ಅನುಷ್ಠಾನಕ್ಕಾಗಿ ತಮ್ಮ ಶಾಖೆಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ಎನ್‌ಬಿಎಫ್‌ಸಿಗಳಿಗೆ ತಿಳಿಸಲಾಗಿದೆ.

**ತಮ್ಮ ವಿಶ್ವಾಸಿ,**
**(ಪಿ. ಕೃಷ್ಣಮೂರ್ತಿ)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು– ಪ್ರಭಾರ**